ಕೊಡಬೇಕಂತ ಅನಸೇದ. ಕಲ್ಯೂ ಇಚ್ಛಾ ಇದ್ರೂ ಬಡತನದಿಂದ ಕಲೀಲಿಕ್ಕಾಗದ ಹೆಣ್ಣಮಕ್ಕಳು ಇರ್ತಾರಲಾ, ಅಂಥವ್ರನ್ನ ಸರಿ ಗುರ್ತ ಹಿಡದು ಅವರಿಗೆ ಸಹಾಯ ಮಾಡ್ರಿ. ನಾ ಅಂತೂ ಕಲಿಲಿಲ್ಲ. ಹಟಾ ಮಾಡಿದ್ರ ನಮ್ಮಪ್ಪ ಕಲಸ್ತಿದ್ದನೋ ಏನೋ! ಆದ್ರ ನಾ ಜಿದ್ದ ಹಿಡದ ಕಲೀಲಿಲ್ಲ. ಆವಾಗ ಅಷ್ಟ ತಿಳವಳಕಿ ಇರಲಿಲ್ಲ. ಈಗ ನಿಮ್ಮಂಥಾ ಹೆಣ್ಣಮಕ್ಕಳ್ನ ನೋಡಿದ್ರ ನಾನೂ ಕಲೀಬೇಕಿತ್ತು ಅನಸ್ತದ. ನಿಮ್ಮನ್ನ ನೋಡಿದ್ರ ಎಷ್ಟ ಖುಷಿ ಆಗ್ತದ ಗೊತ್ತೂ? ಛಂದನ್ನಿ ಸೀರಿ ಉಟಕೊಂಡು ನಾಜೂಕಾಗಿ ನೀವು ಹೋಗೂದ ನೋಡಕೋತ ನಿಲ್ಲಬೇಕ ಅನಸ್ತದ. ಎಷ್ಟ ಹುಡಗೋರಿಗೆ ವಿದ್ಯಾ ಬುದ್ಧಿ ಕೊಟ್ಟು ಪುಣ್ಯಾ ಕಟಕೋತೀರಿ. ಅದಕ್ಕs ನಿಮ್ಮ ಕೈಯಾಗ ರೊಕ್ಕಾ ಕೊಟ್ರ ನೀವು ಅದನ್ನ ನನ್ನ ಆಶಾಧಂಗ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕ ಕೊಡ್ತೀರಿ ಅಂತ ಮನಸ್ಸು ಹೇಳ್ತು."

ನನಗೆ ಏನು ಹೇಳಬೇಕೋ ತಿಳಿಯಲಿಲ್ಲ. ಆದರೆ, ನನ್ನ ಮೌನ ಅವಳಲ್ಲಿ ಅನುಮಾನ ಹುಟ್ಟಿಸಿರಬಹುದು.

"ಅಕ್ಕಾ, ನನ್ನ ರೊಕ್ಕಾ ಹೆಂಗ ತೊಗೋಳ್ಳೋದಂತ ಹಿಂದಮುಂದ ನೋಡಬ್ಯಾಡ್ರಿ. ನನ್ನ ಕೆಲಸ ಹೊಲಸ ಇರಭೌದು, ಆದ್ರ ರೊಕ್ಕ ಎಲ್ಲಾದರ್ೂ ಒಂದ ಥರಾ ಇರ್ತದ. ನಾ ಗಳಿಸಿದ್ರೂ, ನೀವು ಗಳಿಸಿದ್ರೂ ಅದು ಒಂದs, ಅದು ಪವಿತ್ರನs."

"....."

"ನನ್ನಂಥಾವ್ರನ್ನ ಸಮಾಜ ಒಂಥರಾ ಹೇಶಿಗಿಯಿಂದ ನೋಡ್ತದ. ಆದ್ರ ನೀವs ವಿಚಾರ ಮಾಡ್ರಿ. ಇತ್ತಿತ್ಲಾಗ ಮ್ಯಾಲಿಂದ ಮ್ಯಾಲೆ ನಡಿಯೋ ರೇಪ್ ಸುದ್ದಿ ಓದಿ ಓದಿ, ನಮ್ಮಂಥಾವ್ರು ಇರೋದ್ರಿಂದ ಈ ಸಮಾಜ ಒಂದಿಷ್ಟರೇ ಸುರಳೀತ ನಡದದ ಅಂತ ನನಗಂತೂ ಅನಸೇದ. ವೇಶ್ಯೆರು ಹಿಂದಿನ ಕಾಲದಾಗೂ ಇದ್ರು. ಆದ್ರ ಆಗ ಅವ್ರಿಗೆ ಒಂದ ಮರ್ಯಾದಿ ಸಿಗತಿತ್ತು. ಈಗ ನಮ್ಮನ್ನ ಅತಿಶಯ ಕೀಳಾಗಿ ನೋಡ್ತಾರ ಜನಾ. ನಿಮ್ಮ ಫ್ರೆಂಡು ನಯನಾ, ಅಕಿ ನನಗೂ ಫ್ರೆಂಡ್ ಆಗಿದ್ಲು ಒಂದ ಕಾಲಕ್ಕ. ಆದ್ರ ಈಗ ಮಾತಾಡುದಿಲ್ಲ. ನನ್ನ ನೋಡಿದ್ರ ಮುಖಾ ಆ ಕಡೆ ಮಾಡಿ ಓಡಿ ಹೋಗ್ತಾಳ. ನನಗೂ ನಿಮ್ಮಂಥಾ ಕಲತಾವ್ರ ಜೊತಿ ಮಾತಾಡಬೇಕು, ನನ್ನ ಕೆಲವೊಂದು ವಿಷಯ ಹೇಳ್ಬೇಕು ಅನಸ್ತದ. ನಾನೂ ದಿನಾ ಪೇಪರ್ ಓದ್ತೇನಿ ಅಕ್ಕಾ. ಕಾದಂಬರಿ ಓದ್ತೇನಿ. ನಮ್ಮವ್ವ ನನ್ನ ಸುಮ್ಮ ಕೂಡಸಲಿಕ್ಕೆ ಪುಸ್ತಕಾ ಕೊಡ್ತಿದ್ಲು, ಈಗಿನಾವ್ರು ಮೊಬೈಲ್ ಕೊಟ್ಟಂಘ" ಎಂದು ನಕ್ಕಳು.

"ಹಂಗಾಗಿ ಓದೋ ಚಟಾ ಬೆಳೀತು. ಓದಿ ಓದಿ ನನಗೂ ಏನೇನೋ ಭಾವನಾ ಬರ್ತಾವ ಮನಸ್ಸಿನೊಳಗ. ಅದನ್ನ ಯಾರ್ದರೆ ಮುಂದ ಹೇಳಬೇಕು ಅಂದ್ರ ನಿಮ್ಮಂಥಾ ಕಲತವ್ರು, ಶಾಣ್ಯಾರು ಯಾರೂ ನನ್ನ ಮಾತು ಕೇಳಂಗಿಲ್ಲ."

"ಅಕ್ಕಾ, ನೀವು ಗಂಗಾ ನದಿ ನೋಡೀರಿ?" ಒಮ್ಮಿಲೇ ಕೇಳಿ ಪ್ರಶ್ನಾರ್ಥಕವಾದಳು.

ನಾನು ಹೂಂ ಎನ್ನುವಂತೆ ನಸುನಕ್ಕು ಸುಮ್ಮನಾದೆ.

ಮದುವೆಯಾದ ವರುಷವೇ ದೆಹಲಿಗೆ ಹೋಗುವ ಅವಕಾಶ ಬಂದಿತ್ತು. ಆಕಾಶನಿಗೆ ಅಲ್ಲಿ ಆಫೀಸ್ ಕೆಲಸ. ಅವನ ಜೊತೆಗೆ ನಾನು. ದಿಲ್ಲಿ ನೋಡಿದವರು ಹರಿದ್ವಾರ, ಋಷಿಕೇಶಗಳನ್ನೂ ನೋಡಲು ಹೋಗಿದ್ದೆವು. ಹರಿದ್ವಾರದ ಹರ ಕಿ ಪೌಡಿಯ ಮೆಟ್ಟಿಲುಗಳ ಮೇಲೆ ಕುಳಿತು ಇಳಿಸಂಜೆಯ ಹೊತ್ತಿನ ಗಂಗೆಯ ಮೈಮೇಲಿನ ತಂಗಾಳಿಯನ್ನು ಸವಿಯುತ್ತ ಕೂತಿದ್ದವು. ಗಂಗಾ ಆರತಿಯನ್ನು ನೋಡುವ ಚಿಕ್ಕವಳಿದ್ದಾಗಿನಿಂದ ಬೆಳೆದ ಹಂಬಲ ಈಗ ಸಾಕಾರವಾಗುವ ಸಮಯ ಬಂದಿತ್ತು. ಚೋಟಿವಾಲಾ ಧಾಬಾದಲ್ಲಿ ಛೋಲೆ–ಭತೂರೆ ತಿಂದು, ಗಲ್ಲಿ ಗಲ್ಲಿಗಳಲ್ಲಿರುವ ನಾನಾ ದೇವರ ದೇವಸ್ಥಾನಗಳನ್ನು ನೋಡುತ್ತ ಅಲೆದಿದ್ದೆವು. ಸೂರ್ಯ ಮುಳುಗುವ ಹೊತ್ತಿಗೆ ಸರಿಯಾಗಿ ನದಿದಂಡೆಗೆ ಗುಂಪುಗುಂಪಾಗಿ ಜನ ಬರಲಾರಂಭಿಸಿದರು. ಹರ ಕಿ ಪೌಡಿಯ ಮೆಟ್ಟಿಲುಗಳ ತುಂಬ ಜನವೋ ಜನ.